"ಹೋಗುವ ಮುನ್ನ ಒಂದು ಮುತ್ತುಕೊಡು" ಸಲೀಮ್ ದೀನವಾಗಿ ಅಂಗಲಾಚುತ್ತಿದ್ದ. ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡು, ಬೇಕೋಬೇಡವೋ ಎಂಬಂತೆ ಅವನ ಮುಖದ ಮೇಲೆ ತುಟಿಗಳ ಬದಲಾಗಿ ವಸಡು, ಹಲ್ಲುಗಳಿದ್ದ ಜಾಗದಲ್ಲಿ ಅಂಟದಂತೆ ಮುತ್ತಿಟ್ಟು ಹೊರಟುಹೋದಳು ಮನೋರಮ. ಆಕೆ ಚುಂಬಿಸಿದ ಜಾಗದಲ್ಲಿ ಹೂವುಗಳು ಮೊಳೆಯಲಾರಂಭಿಸಿದವು. ಯುದ್ಧಭೂಮಿಯೆಲ್ಲಾ ಪರಿಮಳ ಭರಿತವಾಗುತ್ತಿದ್ದುದು ಸಲೀಮನಿಗೆ ಗೊತ್ತಾಗುತ್ತಲೇ ಇತ್ತು.

★★★

ಮುಖದ ಮೇಲೆ ಹೂವುಗಳು ಮೊಳೆತ ಕನಸನ್ನು ಕಂಡ ಆರು ತಾಸುಗಳ ನಂತರ ಸಲೀಮನನ್ನು ಸ್ಟೇಶನ್‌ನಿಂದ ಹೊರಬಿಟ್ಟರು.

★★★

"ನಮ್ಮನ್ನು ಜಾಗೃತಗೊಳಿಸುವ ಕನಸುಗಳಿಲ್ಲ" ಗಟ್ಟಿಯಾಗಿ ಗೊಣಗಿದ ಸಲೀಮ್ ಸುಂದರ್, ಹಾಗೆ ಗೊಣಗುತ್ತಾ ಜೋರಾಗಿ ಅಂದುಬಿಟ್ಟ. "ಕನಸುಗಳ ಸಾವೇ ನಮ್ಮನ್ನು ಎಚ್ಚರಗೊಳಿಸುತ್ತದೆ" ಎಂದು.

ಕೇಳಿಸಿಕೊಂಡಂತೆ, ಕೇಳಿಸಿಕೊಂಡಿಲ್ಲದಂತೆ ಕುಳಿತಿದ್ದಳು ಮನೋರಮ. ಜೈಲಿನಿಂದ ಬಂದ ಒಂದು ವಾರದ ನಂತರ ಇಬ್ಬರೂ ಭೇಟಿಯಾಗಿದ್ದರು. ಹರಿವ ನೀರು, ಬೆಟ್ಟದಸಾಲು, ಸುಂದರ ಏಕಾಂತ ಸಂಜೆ ಪ್ರೇಮಿಗಳಿಗೆ ಪ್ರೀತಿಯ ಪ್ರತೀಕಗಳು. ಅವರಿಬ್ಬರು ಮಾತ್ರ ಕಾವ್ಯದ ಸೆಲೆ ಬತ್ತಿದ ವೃದ್ಧಕವಿಗಳಂತೆ ಕಾಣುತ್ತಿದ್ದರು. "ಈ ಜೈಲುಗಳು, ಈ ಯುದ್ಧದ ಕನಸುಗಳು, ಏನಿದೆಲ್ಲಾ?" ದುಗುಡದಿಂದ ಕೇಳಿದಳು ಮನೋರಮ. ಸಲೀಮ್ ಮಾತನಾಡಲಿಲ್ಲ.

"ನಾನೊಂದು ಸಲಹೆ ಕೊಡಲೇ? ಸಲೀಮ್ ಸುಂದರ್‌ನನ್ನು, ಎಸ್. ಸುಂದರ್‌ನೆಂದೋ, ಬರೀ ಸುಂದರ್‌ನೆಂದೋ, ಹೋಗಲಿ, ಮೋಹನ ಸುಂದರ್‌ನೆಂದೋ ಬದಲಾಯಿಸೋಣವಾ? ಎಂದಳು ಮನೋರಮ.

ಬೆಚ್ಚಿಬಿದ್ದ ಸಲೀಮ್. ಒಂದಿಷ್ಟು ಅರ್ಥವಾಗಿ, ಒಂದಿಷ್ಟು ಅರ್ಥವಾಗದೇ ಕೊಂಚ ಭಯ, ಕೊಂಚ ದಿಗಿಲು, ಕೊಂಚ ದುಗುಡ ಉಂಟಾಯಿತು ಅವನಲ್ಲಿ.

"ಈ ಹಿಂಸೆಗೆ, ಈ ದುಃಖಕ್ಕೆ ಸರಿಯಾದ ಉತ್ತರ... ಹೆಸರೇ ತಾನೇ?"

'ಗಾಡ್! ಮನೋರಮ, ಈ ಮನೋರಮಾಳೇ?' ಸಲೀಮ್ ಗೊಣಗಿಕೊಂಡ.

ಮನೋರಮ ಸಲೀಮನ ಹತ್ತಿರ ಸರಿದು, ಅವನ ಮುಖವನ್ನು ಹತ್ತಿರ ತಂದುಕೊಂಡಳು. ಯುದ್ಧಭೂಮಿ, ತುಂಡಾದ ತುಟಿಗಳು ಕಣ್ಮುಂದೆ ಬಂದವು ಸಲೀಮನಿಗೆ. ಮುಖವನ್ನು ಎದೆಗವಚಿಕೊಂಡು, "ನನ್ನ ಮಾತು ಕೇಳು, ನೀನು ಮುಸ್ಲಿಮನೋ, ನಾನು ಹಿಂದುವಾಗದಿದ್ದರೆ ಆಗುವ ನಷ್ಟವೇನು?" ಮನೋರಮ ಮಾತನಾಡುತ್ತಲೇ ಇದ್ದಳು. ಸಲೀಮನಿಗೆ ಏನೂ ಕೇಳಿಸುತ್ತಿರಲಿಲ್ಲ. ಸುಡುತ್ತಿರುವ ಮನೆಗಳು, ಗಾಯಗೊಂಡ ದೇಹಗಳು, ನೆನಪು ನೆನಪುಗಳಾಗಿ ಬೇರ್ಪಟ್ಟು ಕೇವಲ ಮಾಂಸದ ಕಟ್ಟಿನಂತೆ ಉಳಿದ ಅಮ್ಮಿ – ಕಣ್ಮುಂದೆ ಬಂದರು.

ಬೆಚ್ಚನೆಯ, ಗಾಢವಾದ ಮನೋರಮಳ ಉಸಿರು ಅವನ ದೇಹವನ್ನೆಲ್ಲಾ ಆವರಿಸುತ್ತಿತ್ತು. ಸಲೀಮ್ ಮುಖದಲ್ಲಿ ದುಗುಡ, ನಿರ್ಲಿಪ್ತತೆ... 'ಮೋಹನ ಸುಂದರ್, ಮೋಹನ ಸುಂದರ್, ಮೋಹನ ಸುಂದರ್' ಎಂದು ಗೊಣಗಿಕೊಂಡ.

ಮನೋರಮಳ ದೇಹ, ಅವನ ದೇಹವನ್ನು ಸ್ಪರ್ಶಿಸುತ್ತಿದ್ದಂತೆಯೇ ಅವನಲ್ಲಿ